ದಿನಾಂಕ **: 06.03.2026** ರಂದು ಪಿಡಬ್ಲ್ಯೂ - 1 ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

<u>ಪಾಟೀ ಸವಾಲುಃ</u> ಶ್ರೀಮತಿ ಎನ್.ಬಿ.ಎಸ್., 2 ನೇ ಎದುರುದಾರರ ಪರ ವಕೀಲರಿಂದಃ

ನನ್ನ ಮಗಳು ಈಗ 9 ನೇ ತರಗತಿಯಲ್ಲಿ ಓದುತ್ತಿದ್ದಾಳೆ. ಅಪಘಾತದ ಸಮಯದಲ್ಲಿ ನನ್ನ ಮಗಳಲು 3 ನೇ ತರಗತಿ ಓದುತ್ತಿದ್ದಳು. ಅಪಘಾತವಾದ 3 ವರ್ಷದ ನಂತರ ಅರ್ಜಿ ಸಲ್ಲಿಸಿದ್ದದ್ದೇನೆ ಎಂದರೆ ಸರಿ. ನಮಗೆ ಪರಿಹಾರಕ್ಕಾಗಿ ವಕೀಲರನ್ನು ಭೇಟಿ ಮಾಡಬೇಕು ಎನ್ನುವ ವಿಚಾರ ತಿಳಿದಿರಲಿಲ್ಲ. ನಾನು ಹೇಳಿದ ಹಾಗೆ ಅಪಘಾತವಾಗಿರದ ಕಾರಣ ನಾವು ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತವಾಗಿರುತ್ತದೆ. ಅಪಘಾತಕ್ಕೂ ಹಾಗೂ ನಾನುತಿಳಿಸಿರುವಂತೆ ನನ್ನ ಮಗಳಿಗೆ ಆದಂತಹ ಗಾಯಗಳಿಗೂ ಸಂಬಂಧ ಇಲ್ಲದ ಕಾರಣ ನಾನು ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ. ನಿಗದಿತ ಸಮಯದಲ್ಲಿ ಅರ್ಜಿಯನ್ನು ಸಲ್ಲಿಸದ ಕಾರಣ ನಾನು ಪರಿಹಾರಕ್ಕೆ ಅರ್ಹಳಲ್ಲ ಎಂದರೆ ಸರಿಯಲ್ಲ.

ನನ್ನ ಮಗಳು ಯಾವ ವರ್ಷದಲ್ಲೂ ಅಂದರೆ 3 ರಿಂದ 9 ನೇ ತರಗತಿವರಗೆ ಯಾವುದೇ ಶೈಕ್ಷಣಿಕ ವರ್ಷಗಳನ್ನು ಕಳೆದುಕೊಂಡಿರುವುದಿಲ್ಲ ಎಂದರೆ ಸರಿ. ಈಗಲೂ ನನ್ನ ಮಗಳು ಶಾಲೆಗೆ ಹೋಗುತ್ತಿದ್ದಾಳೆ. ಆದರೆ

ಹಿಂದೆ ಇದ್ದ ಹಾಗೆ ಈಗ ಆಕ್ಟಿವ್ ಆಗಿ ಇರುವುದಿಲ್ಲ. ಹಾಗೆ ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇರುವುದಿಲ್ಲ. ನನ್ನ ಮಗಳು ಶಾಲೆಯಿಂದ ಬಂದು ರಸ್ತೆ ದಾಟಲು ನಿಂತಿದ್ದ ಸಮಯದಲ್ಲಿ ಎದುರುದಾರರ ವಾಹನವು ಬಂದು ನನ್ನ ಮಗಳಿಗೆ ಅಪಘಾತಪಡಿಸಿರುತ್ತದೆ. ಅಪಘಾತದ ಸಮಯದಲ್ಲಿ ನಾನು ಸ್ಥಳದಲ್ಲಿ ಇರಲಿಲ್ಲ. ಹಾಗೆ ಅಪಘಾತವಾಗದೇ ಇದ್ದರೂ ಸಹಾ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

Sd/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಎಂಎಸಿಟಿ.,
ಕಾರ್ಕಳ.